**<u>ಸಾಕ್ಷಿಗೆ ದಿನಾಂಕ 04-08-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

ಪಾಟೀ**ಸವಾಲುಃ 4 ನೇ ಎದುರುದಾರರ ಪರ ಶ್ರೀ ಎಂ ಎಂ ವಕೀಲರು ಶ್ರೀ ಎಂ ಎನ್ ವಕೀಲರ ಪರವಾಗಿಃ**

1. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಒಂದನೇ ಎದುರುದಾರರ ವಾಹನದಲ್ಲಿ ಪ್ರಯಾಣಿಸುತ್ತಿದ್ದ ರಮೇಶ್ ಎನ್ನುವವರು ದೂರು ನೀಡಿರುತ್ತಾರೆ ಎಂದರೆ ಸರಿ. ಸದರಿ ದೂರಿನ ಪ್ರಕಾರ ಒಂದನೇ ಎದುರುದಾರರ ವಾಹನದ ಚಾಲಕ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೇ ಮಾಡಿಕೊಂಡು ಹೋಗಿ ಬೇರೆ ವಾಹನವನ್ನು ಹಿಂದಿಕ್ಕುವ ಭರದಲ್ಲಿ ನಾಲ್ಕನೇ ಎದುರುದಾರರ ವಾಹನಕ್ಕೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತಪ್ಪಾಗಿ ದೂರು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

2. ಪೊಲೀಸ್ ಎಲ್ಲಾ ದಾಖಲೆಗಳಲ್ಲಿ ನಾಲ್ಕನೇ ಎದುರುದಾರರ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ನಮೂದು ಆಗಿರುವುದಿಲ್ಲ ಎಂದರೆ ಸರಿ. ಪೊಲೀಸರು ಸಂಪೂರ್ಣ ತನಿಖೆ ಮಾಡಿ ಒಂದನೇ ಎದುರುದಾರರ ವಾಹನದ ಚಾಲಕನ ವಿರುದ್ಧ ದೋಷಾರೋಪಣಾಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ಒಂದನೇ ವಾಹನಕ್ಕೆ ನೀಡಲಾದ ವಿಮಾ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ತಪ್ಪಾಗಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ದೋಷರೋಪಣಾಪಟ್ಟಿಯನ್ನು ಒಂದನೇ ಎದುರುದಾರರ ವಾಹನದ ವಿರುದ್ದ ಸಲ್ಲಿಸಿರುವುದರಿಂದ ಅರ್ಜಿದಾರರಿಗೆ ನಾವು ಪರಿಹಾರ ನೀಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ.

3. ಒಂದನೇ ಎದುರುದಾರರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ತಿಳಿದುಕೊಂಡಿರುತ್ತೇನೆ. ಸದರಿ ಲಿಖಿತ ಹೇಳಿಕೆಯಲ್ಲಿ ನಾಲ್ಕನೇ ಎದುರುದಾರರ ವಾಹನದ ಚಾಲಕನ ತಪ್ಪಿನಿಂದ ಈ ಅಪಘಾತವಾಗಿದೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ಒಂದನೇ ಎದುರುದಾರರಾಗಲೀ ಅಥವಾ ಒಂದನೇ ಎದುರುದಾರರ ವಾಹನದ ಚಾಲಕರಾಗಲೀ ಪೊಲೀಸರು ಸಲ್ಲಿಸಿರುವ ದೋಷಾರೋಪಣಾ

ಪಟ್ಟಿಯನ್ನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ. ಪರಿಹಾರ ನೀಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ**ಸವಾಲುಃ ಅರ್ಜಿದಾರರ ಪರ ಶ್ರೀಮತಿ ಆರ್ ಎಂ ವಕೀಲರು ಶ್ರೀ ಬಿ ಎಸ್ ಎಂ ವಕೀಲರ ಪರವಾಗಿಃ**

ಅರ್ಜಿದಾರರ ಪರ ವಕೀಲರು, ನಾಲ್ಕನೇ ಎದುರುದಾರರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅರ್ಜಿದಾರರಿಗೆ ಅಳವಡಿಸಿಕೊಳ್ಳಲು ವಿನಂತಿಸಿಕೊಂಡಿದ್ದರಿಂದ, ಅಳವಡಿಸಿಕೊಳ್ಳಲಾಯಿತು.

ಪಾಟೀಸವಾಲುಃ 1 ನೇ ಮತ್ತು 3 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರುಹಾಜರು. ಆದ್ದರಿಂದ ಅವರ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು .
ಮರು-ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**(ಧನೇಶ್ ಮುಗಳಿ)**
**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**